**CC 2371/2021**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್ 2371/2021**

**ಸಿ ಡಬ್ಲ್ಯೂ -1**
**ಪಿ ಡಬ್ಲ್ಯೂ -1**

| | |
|---|---|
| **ಸಾಕ್ಷಿಯ ಹೆಸರು -** | **ಯಂಕಪ್ಪ** |
| **ತಂದೆಯ ಹೆಸರು -** | **ದುರಗಪ್ಪ** |
| **ವಯಸ್ಸು -** | **63 ವರ್ಷಗಳು** |
| **ಉದ್ಯೋಗ -** | **ವ್ಯವಸಾಯ** |
| **ವಾಸಸ್ಥಳ -** | **ಕಡ್ಡಿರಾಂಪುರ** |

**ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಆರೋಪಿ ನನ್ನ ಅಳಿಯ. ನನಗೂ ಮತ್ತು ಆರೋಪಿಗೂ ನೀರಿನ ಪೈಪ್ ವಿಚಾರವಾಗಿ ಬಾಯಿ ಮಾತಿನಲ್ಲಿ ಜಗಳ ಆಗಿತ್ತು. ಆರೋಪಿ ನನಗೆ ಹೊಡೆ ಬಡೆ ಮಾಡಿಲ್ಲ, ಬೈದಿಲ್ಲ ಮತ್ತು ಜೀವ ಬೆದರಿಕೆ ಹಾಕಿಲ್ಲ.

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ದೂರಿನಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ದೂರನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಎಂದು ಗುರುತಿಸಲಾಯಿತು. ನಿಪಿಃ 1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಸ್ಥಳ ಪಂಚನಾಮೆ ಮತ್ತು ಜಪ್ತು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು. ನಿಪಿಃ 2 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿಃ 2 ರಲ್ಲಿ ಏನು ಬರೆದಿದೆ ಎಂದು

ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುವನ್ನು ಜಪ್ತು ಪಡಿಸಿಕೊಂಡಿಲ್ಲ.

ಈಗ ನಾನು ನೋಡುತ್ತಿರುವ **2** ಪೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಪೋಟೋಗಳನ್ನು ಒಟ್ಟಾಗಿ ನಿಪಿಃ **3** ಎಂದು ಗುರುತಿಸಲಾಯಿತು. ನಿಪಿಃ **3** ರ ಪೋಟೋವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 15-10-2021 ರಂದು ನಾನು ಮನೆಮುಂದೆ ಇದ್ದಾಗ ಆರೋಪಿ ಗ್ರಾಮ ಪಂಚಾಯಿತಿಯವರು ಹಾಕಿರುವ ಪೈಪ್ ಲೈನ್ ವಿಚಾರವಾಗಿ ನನ್ನನ್ನು ಕುರಿತು ನಾನು ಎಕೆ ಆತನ ಜಾಗದಲ್ಲಿ ಪೈಪ್ ಲೈನ್ ಹಾಕಿಸಿದ್ದೇನೆ ಎಂದು ಪ್ರಶ್ನಿಸಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಅಂದರೆ ಸರಿಯಲ್ಲ. ನಾನು ಎಕೆ ಬೈಯುತ್ತಿಯಾ ಎಂದು ಕೇಳಿದಾಗ ಆತನ ಅಲ್ಲೇ ಇದ್ದ ಪ್ಲಾಸ್ಟಿಕ್ ಚೇರ್ ನಿಂದ ಹೊಡೆದು ಗಾಯಪಡಿಸಿದ ಅಂದರೆ ಸರಿಯಲ್ಲ. ಆರೋಪಿ ನನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದ ಅಂದರೆ ಸರಿಯಲ್ಲ. ಸದರಿ ಘಟನೆಗೆ ಸಂಬಂಧಿಸಿದ ನಿಪಿಃ 1 ರ ದೂರು ನೀಡಿರುತ್ತೇನೆ ಅಂದರೆ ಸರಿಯಲ್ಲ.

ದೂರು ನೀಡಿದ ತರುವಾಯಿ ದಿಃ 16-10-2021 ರಂದು ನಾನು ಗುನ್ನಾ ಸ್ಥಳವನ್ನು ತೋರಿಸಿದಾಗ ಚಾಸಾ -2 ಮತ್ತು 3 ರವರ ಸಮಕ್ಷಮ ಪೋಲಿಸರು ನಿಪಿಃ 2 ರಂತೆ ಪಂಚನಾಮೆ ಕ್ರಮ ಜರುಗಿಸಿ ಪ್ಲಾಸ್ಟಿಕ್ ಚೇರ್ ಅನ್ನು ಜಪ್ತು

ಪಡಿಸಿಕೊಂಡಿದ್ದರು ಅಂದರೆ ಸರಿಯಲ್ಲ. ಆಗಲೇ ನಿಪಿಃ 3 ರ ಪೋಟೋ ತೆಗೆಯಿಲಾಗಿತ್ತು ಅಂದರೆ ಸರಿಯಲ್ಲ.

ಆರೋಪಿ ನನ್ನ ವಿರುದ್ದ ಸಿಸಿ 2372/2021 ಎಂಬ ಪ್ರಕರಣ ದಾಖಲಿಸಿರುತ್ತಾನೆ ಅಂದರೆ ಸರಿ. 2 ಪ್ರಕರಣಗಳಲ್ಲಿ ರಾಜಿ ಮಾಡಿಕೊಂಡಿರುತ್ತೇವೆ ಅಂದರೆ ಸರಿ. ರಾಜಿ ಮಾಡಿಕೊಂಡ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎ.ಎಂ.ಎಸ್ ವಕೀಲರಿಂದಃ** ಇಲ್ಲಾ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.